# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಎಂ.ಎಲ್. ವೆಂಕಟೇಶ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದೊಡ್ಡಕುಂಬ್ಳೆ ಗ್ರಾಮ ಪಂಚಾಯಿತಿ, ಹೊಳನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ, ಇವರ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅಸಪ ಸಂಖ್ಯೆ: ಉಪಲೋಕ್/ ಎಂವೈಎಸ್–8870/2016/ಡಿಆರ್‌ಇ–5 ದಿನಾಂಕ:14.06.2017

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 27.05.2017 ರ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

1. ಈ ದೂರನ್ನು ಶ್ರೀ ನವೀನಕುಮಾರ ತಾಲ್ಲೂಕು ಅಧ್ಯಕ್ಷರು, ಕರ್ನಾಟಕ ರಾಜ್ಯ ದಲಿತ ವೇದಿಕ ಕಾಮೇನಹಳ್ಳಿ ಗ್ರಾಮ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ ಎಂ.ಎಲ್ ವೆಂಕಟೇಶ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದೊಡ್ಡಕುಂಬ್ಳೆ ಗ್ರಾಮ ಪಂಚಾಯಿತಿ, ಹೊಳನರಸಿಪುರ ತಾಲ್ಲೂಕು, ಹಾಸನ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಲ್ಲಿಸಿದ್ದಾರೆ.
2. ದೂರುದಾರರು ತಮ್ಮ ದೂರಿನಲ್ಲಿ 2015–16 ನೇ ಸಾಲಿನಲ್ಲಿ ಕಾಮೇನಹಳ್ಳಿ ಗ್ರಾಮದ ಲಿಂಗರಾಜು ಎನ್ನುವವರಿಗೆ ರೂ.12,000/– ಗಳನ್ನು ಶೌಚಾಲಯ ನಿರ್ಮಾಣಕ್ಕೆ ಬಿಡುಗಡೆ ಮಾಡಿರುತ್ತಾರೆ. ಆದರೆ ಅದನ್ನು ನಿರ್ಮಿಸಿಲ್ಲ. ಅದರ ಹಿಂದಿನ ವರ್ಷದಲ್ಲಿ ಲಿಂಗರಾಜು ಅಜ್ಜಿ ಯಲ್ಲಮ್ಮ ಇವರಿಗೆ ನರೇಗಾ ಯೋಜನೆಯಡಿಯಲ್ಲಿ ಶೌಚಾಲಯ ನಿರ್ಮಾಣಕ್ಕಾಗಿ ರೂ.4,700/– ಗಳು ಹಣ ಪಾವತಿ ಮಾಡಲಾಗಿದೆ. 1 ಶೌಚಾಲಯಕ್ಕೆ 2 ಸಲ ಹಣ ಪಾವತಿಯಾಗಿದೆ. ಆದ್ದರಿಂದ ತನಿಖೆಯನ್ನು ನಡೆಸಿ ಕ್ರಮವನ್ನು ತೆಗೆದುಕೊಳ್ಳಲು ಕೋರಿಕೊಂಡಿದ್ದಾರೆ.
3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀಮತಿ ಯಲ್ಲಮ್ಮ ಇವರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ. ಇವರು 2015–16 ರಲ್ಲಿ ಸ್ವಂತ ಶೌಚಾಲಯ ನಿರ್ಮಿಸಿಕೊಂಡಿದ್ದಾರೆ. ನಿರ್ವಹಣೆಯ ಕೊರತೆಯಿಂದ ಅದು ಬಿದ್ದು ಹೋಗಿರುತ್ತದೆ. ಅರ್ಜಿದಾರರು ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರವರಿಗೆ ತಿಳಿಸಿದ್ದರಿಂದ. ದಿನಾಂಕ:26.09.2016 ರಂದು ಅಂದಾಜು ಮತ್ತು ಮೌಲ್ಯಮಾಪಕ ಅಧಿಕಾರಿಗಳು. ಸ್ಥಳ ಪರಿಶೀಲನೆ ಮಾಡಿದ್ದಾರೆ. ಲಿಂಗರಾಜು ರವರು ವೈಯಕ್ತಿಕವಾಗಿ ಇನ್ನೊಂದು ಶೌಚಾಲಯ ನಿರ್ಮಾಣಕ್ಕೆ ಅರ್ಜಿ ಸಲ್ಲಿಸಿದ್ದರು. ಹೊಸ ಕುಟುಂಬ ಸೇರ್ಪಡೆಯ ಮೇರೆಗೆ ವರ್ಕ್ ಆರ್ಡರ್ ನೀಡಲಾಗಿದೆ. ನಿಂಗರಾಜ ಇವರಿಗೆ ಪ್ರತ್ಯೇಕ ನಿವೇಶನ ಇದೆ. ಒಂದು ಶೌಚಾಲಯಕ್ಕೆ 2 ಬಿಲ್ ಪಾವತಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.
4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ತಮ್ಮ ಪ್ರತ್ಯುತ್ತರದಲ್ಲಿ ಫಲಾನುಭವಿ ನಿಂಗರಾಜು, ಶೌಚಲಯದ ಸಹಾಯ ಧನ ಪಡೆಯಲು ಮೊದಲು ಸಲ್ಲಿಸಿದ ಅರ್ಜಿಯಲ್ಲಿ ಅವರ ಸಹಿ ಇರಲಿಲ್ಲ. ಹೊಸದಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರವರು ಸಹಿ ಮಾಡಿಸಿಕೊಂಡಿದ್ದಾರೆ. ಈ ಹಿಂದೆ 3 ಹಂತದ ಫೋಟೋ ನೀಡಿದಾಗ ಅದರಲ್ಲಿ ವೆಂಟಿಲೇಟರ್ 3 ಸಣ್ಣ

ತ್ರಿಭೂಜಾಕಾರ ಆಗಿತ್ತು, ಈಗ ಕೊಟ್ಟಿರುವ ಪೋಟೋಗಳು ಬೇರೆಯಾಗಿವೆ. ನಿಂಗರಾಜು ಇವರಿಗೆ ದಿನಾಂಕ:29.02.2016 ರಂದೇ ರೂ.12,000/- ಗಳನ್ನು ಪಾವತಿ ಮಾಡಿದ್ದಾರೆ. ಆದರೆ ಕಾಮಗಾರಿ ಆದೇಶವನ್ನು ದಿನಾಂಕ:01.07.2016 ರಂದು ನೀಡಿರುತ್ತಾರೆ. ಮೊದಲು ಕಾಮಗಾರಿ ಆದೇಶ ನೀಡಿದ ನಂತರ ಹಣ ಪಾವತಿ ಮಾಡಬೇಕು, ಇದು ಸರ್ಕಾರಿ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ, ಲಿಂಗರಾಜು ರವರು ಯಾವುದೇ ಶಾಚಾಲಯ ನಿರ್ಮಾಣ ಮಾಡಿಲ್ಲ. ತಾತ್ಕಾಲಿಕವಾಗಿ ಕಾಮೇನಹಳ್ಳಿಯಲ್ಲಿ ವಾಸವಾಗಿದ್ದಾರೆ. ನಿಂಗರಾಜ ಇವರ ಹೆಸರಿನಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಸ್ಥಿರ ಸ್ವತ್ತಿನ ಖಾತೆ ಇರುವುದಿಲ್ಲ. ಯಲ್ಲಮ್ಮ ಇವರು ನಿರ್ಮಿಸಿರುವ ಶೌಚಾಲಯವು ಚೆನ್ನಾಗಿಯೇ ಇದೆ. ಸರ್ಕಾರದ ಬೊಕ್ಕಸಕ್ಕೆ ನಷ್ಟವುಂಟು ಮಾಡಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವೆಂಕಟೇಶ ಮತ್ತು ಲಿಂಗರಾಜು ಇವರು ಸಾರ್ವಜನಿಕ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಆದ್ದರಿಂದ, ಸೂಕ್ತ ಕ್ರಮ ತೆಗೆದುಕೊಳ್ಳಲು ಕೋರಿಕೊಂಡಿದ್ದಾರೆ.

5. ಈ ಪ್ರಕರಣಕ್ಕೆ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರು ದಿನಾಂಕ:1.09.2016 ರಂದು ಈ ದೂರನ್ನು ಸಲ್ಲಿಸಿದ ನಂತರ ಎದುರುದಾರರಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರವರು ದಿನಾಂಕ:26.09.2016 ರಂದು ಒಂದು ಸ್ಥಳಪರಿಶೀಲನೆಯನ್ನು ಮಾಡಿ ಶ್ರೀಮತಿ ಯಲ್ಲಮ್ಮ ಇವರು 2014-15 ರ ಶೌಚಾಲಯ ಕಾಮಗಾರಿ ಪೂರ್ಣಗೊಂಡಿದ್ದ, ಮನೆ ದುರಸ್ಥಿ ಮಾಡುವ ಸಂದರ್ಭದಲ್ಲಿ ಶೌಚಾಲಯ ನೆಲಸಮಗೊಂಡಿರುತ್ತದೆ. ಸದರಿ ಶೌಚಾಲಯವು ನಿರ್ಮಾಣಗೊಂಡ ಜಾಗವು 2015 ನೇ ಸಾಲಿನಲ್ಲಿ ಲಿಂಗರಾಜು ಇವರ ಹೆಸರಿಗೆ ಬಂದಿದೆ. ಆದ್ದರಿಂದ ಪುನಃ ಅವರ ಹೆಸರಿಗೆ ಶೌಚಾಲಯ ಮಂಜೂರು ಮಾಡಲಾಗಿದೆ. ನಿಂಗರಾಜನ ಹೆಸರಿನಲ್ಲಿಯೇ ಅವರ ಹೆಸರಿನಲ್ಲಿಯೇ ಅವರ ಸ್ವಂತ ಕೈ ಬರಹದಲ್ಲಿ ಮಹಾಜರ್ ಬರೆಸಿದ್ದಾರೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿದಾರರಿಗೆ ಕೆಲವು ದಾಖಲೆಗಳನ್ನು ಕೊಟ್ಟ ನಂತರ ಅರ್ಜಿದಾರರ ಸಹಿಯನ್ನು ಪಡೆಯಲಾಗಿದೆ ಅಂತ ಉತ್ತರಿಸಿದ್ದಾರೆ. ನಿಂಗರಾಜ ಎನ್ನುವವರು ಸಲ್ಲಿಸಿದ ಮೊದಲ ಅರ್ಜಿಯಲ್ಲಿ ಅವರ ಸಹಿ ಇರಲಿಲ್ಲ. ಮಾಹಿತಿ ಹಕ್ಕು ಅಧಿನಿಯಮದಲ್ಲಿ ದೂರುದಾರರು ಇದೇ ಅರ್ಜಿಯ ಪ್ರತಿಯನ್ನು ತೆಗೆದುಕೊಂಡಾಗ ಅದರಲ್ಲಿ ನಿಂಗರಾಜ ಇವರ ಸಹಿ ಇರಲಿಲ್ಲ. ನಂತರ ಶೌಚಾಲಯ ನಿರ್ಮಾಣವಾಗಿದ್ದ ಸ್ಥಳದಲ್ಲಿರುವ ನಿವೇಶನ ನಿಂಗರಾಜ ಇವರ ಹೆಸರಿಗೆ ಖಾತೆಯಾಗಿದೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಯಾವುದೇ ದಾಖಲೆಗಳು ಇಲ್ಲ. ಇದರಿಂದ ಸ್ಪಷ್ಟವಾಗುವುದೇನೆಂದರೆ ಯಲ್ಲಮ್ಮ ಇವರ ಹೆಸರಿನಲ್ಲಿ ಪಾವತಿಯಾಗಿರುವ ಹಣದಲ್ಲಿ ಶೌಚಾಲಯ ನಿರ್ಮಿಸಿ ನಿಂಗರಾಜ ಇವರಿಗೆ ನಂತರ ರೂ. 12,000/- ಗಳನ್ನು ಬೇರೆ ಶೌಚಾಲಯ ಅಂತ ತೋರಿಸಿ ಮಂಜೂರು ಮಾಡಿರುವುದು ಸ್ಪಷ್ಟವಾಗುತ್ತದೆ. ಎದುರುದಾರರು ಸದರಿ ನಿಂಗರಾಜ ಇವರಿಂದ, ಸಹಿ ಇಲ್ಲದ ಅರ್ಜಿ ತೆಗೆದುಕೋಡು ಅದರ ಪ್ರತಿಯನ್ನು ಸಹ ದೂರುದಾರರಿಗೆ ಕೊಟ್ಟು, ನಂತರ ಈ ಸಂಸ್ಥೆಗೆ ದೂರು ಬಂದಾಗ ಸದರಿ ನಿಂಗರಾಜ ಇವರದೇ ಕೈಯಿಂದ ಮಹಾಜರು ಬರೆಸಿ ಬೇಜವಾಬ್ದಾರಿತನದಿಂದ ವರ್ತಿಸಿದ್ದಾರೆ. ಸರ್ಕಾರದ ಹಣವು ದುರುಪಯೋಗವಾಗಿದೆ ಎನ್ನುವುದು ಸ್ಪಷ್ಟವಾಗುತ್ತಿದೆ. ಲಿಂಗರಾಜು ಇವರ ಮನೆ ನಂ.5 ಕಾಮೇನಹಳ್ಳಿ ಗ್ರಾಮ ಅಂತ ಫಲಾನುಭವಿಗಳ ಅರ್ಜಿಯಲ್ಲಿ ನಮೂದಿಸಿದ್ದು, ಚುನಾವಣೆ ಗುರುತಿನ ಚೀಟಿಯಲ್ಲಿ ಮತ್ತು ಆಧಾರ್ ಕಾರ್ಡ್‌ನಲ್ಲಿ 101, ಕಾಮೇನಹಳ್ಳಿ, ಹೊಳೆನರಸೀಪುರ ತಾಲ್ಲೂಕು ಅಂತ ವಿಳಾಸ ನಮೂದು ಆಗಿದೆ. ಈ ಯಾವುದೇ ವಿಷಯಗಳನ್ನು ಶೌಚಾಲಯ ನಿರ್ಮಾಣದ ಮಂಜೂರಾತಿ ಸಮಯದಲ್ಲಿ ಪರಿಗಣಿಸದೇ ಎದುರುದಾರರು ಕರ್ತವ್ಯಲೋಪ ಎಸಗಿದ್ದಾರೆ ಎನ್ನಲು ಸಾಕಷ್ಟು ಆಧಾರಗಳಿವೆ.

6. ಆದುದರಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3(i) (ii) (iii) ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ನಾಗರೀಕ ಸೇವಾ(ನಡತೆ) ನಿಯಾಮಗಳು 1996 ರ ನಿಯಮ 3(i) ರ ಅಡಿಯಲ್ಲಿ ದುರ್ನಡತೆ/ದುರ್ವತನೆ ಕಂಡು ಬಂದಿರುವುದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಶ್ರೀ ಎಂ.ಎಲ್. ವೆಂಕಟೇಶ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದೊಡ್ಡಕುಂಬ್ಳೆ ಗ್ರಾಮ ಪಂಚಾಯಿತಿ, ಹೊಳನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ, ಇವರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3 (i) ರಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಾಮವಳಿ 1957 ರ ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/532/ಗ್ರಾಪಂಕಾ/2017 ಬೆಂಗಳೂರು, ದಿನಾಂಕ–11–07–2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಎಂ.ಎಲ್. ವೆಂಕಟೇಶ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದೊಡ್ಡಕುಂಬ್ಳೆ ಗ್ರಾಮ ಪಂಚಾಯಿತಿ, ಹೊಳನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ–8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. ಪುಟ ಸಂಖ್ಯೆ: 1 ರಿಂದ 46).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೊಳನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.
6. ಶ್ರೀ ಎಂ.ಎಲ್. ವೆಂಕಟೇಶ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದೊಡ್ಡಕುಂಬ್ಳೆ ಗ್ರಾಮ ಪಂಚಾಯಿತಿ, ಹೊಳನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
8. ಗಣಕ ಕೋಶ.